ಶ್ರೀ ವೀರೇಂದ್ರ ಪಾಟೀಲ್.—ಖಾಯಂ ಮಾಡುವ ಪ್ರಶ್ನೆ ಬಗ್ಗೆ ಚೀಫ್ ಇಂಜಿನಿಯರು ಪರಿಶೀಲನೆ ಮಾಡಿ ಸರ್ಕಾರಕ್ಕೆ ಸಿಫಾರಸು ಮಾಡಬೇಕೆಂದು ಹೇಳಿದ್ದೇವೆ. ಅವರು ರಿಪೋರ್ಟ್ ಬಂದ ಪ್ರಕಾರ ನಾವು ಕೆಲವು ಹುದ್ದೆಗಳನ್ನು ಖಾಯಂ ಮಾಡಬೇಕೆಂದು ಹೇಳಿದ್ದೇವೆ. ಕ್ಯಾಟಗರಿ ಆಫ್ ಪೋಸ್ಟ್ ಯಾವುವು ಎನ್ನುವುದನ್ನು ಅವರೇ ನಿರ್ಣಯ ಮಾಡುತ್ತಾರೆ.

ಮಾನ್ಯ ಗೋಪಾಲಗೌಡರು ಹೇಳಿದಹಾಗೆ ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ಬಹಳ ದಿವಸಗಳಿಂದ ಬಂದಿದೆ. ಮೊನ್ನೆ ಮೊನ್ನೆ ಬಂದಿದ್ದಲ್ಲ, ಹೊಸದಾಗಿ ಆದದ್ದಲ್ಲ. ಅವಕ್ಕಾಗಿ ಯಾರು ಹೆಚ್ಚು ಸರ್ವಿಸ್ ಮಾಡಿದ್ದಾರೆ ಅವರನ್ನು ಖಾಯಂ ಮಾಡುವುದು ಇಂಥವುಗಳನ್ನು ಸರ್ಕಾರದವರು ಮತ್ತು ಚೀಫ್ ಇಂಜಿನಿಯರು ಪರಿಶೀಲನೆ ಮಾಡುತ್ತಾರೆ.

Cadre and Recruitment Rules of Language Teachers

321. Sri P. VENKATAGIRIYAPPA (Kolar).—

Will the Minister for Agriculture and Education be pleased to state :—

(*a*) whether it is a fact that Cadre and Recruitment Rules in respect of Language Teachers in High Schools of the Education Department have been finalised ;

(*b*) whether it is a fact that the promotions from lower grade to Selection grade have been fixed on Languagewise basis as against the existing rules in which promotions are made taking all the language teachers as a unit ;

(*c*) whether it has come to notice of Government that teachers working in languages where the number is very small are pleased at a disadvantageous position ?

A.—Sri S. R. KANTHI (Minister for Law and Parliamentary Affairs) [On behalf of Sri K. V. Shankara Gowda (Minister for Agriculture and Education)].—

(*a*) Yes.
(*b*) Yes.
(*c*) No.

ಶ್ರೀ ಪಿ. ವೆಂಕಟಗಿರಿಯಪ್ಪ.—ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರುಗಳಿಗೆ ಬಡ್ತಿಯನ್ನು ಕೊಡುವ ವಿಚಾರದಲ್ಲಿ ಇರುವ ನಿಯಮಾವಳಿಗಳನ್ನು ಬದಲಾಯಿಸುವುದಕ್ಕೆ ಕಾರಣವೇನು ?

† ಶ್ರೀ ಎಸ್. ಆರ್. ಕಂಠಿ.—ಕಾಲಮಾನ ಪರಿಸ್ಥಿತಿಯ ಪ್ರಕಾರ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ 1967ರಲ್ಲಿ ಬದಲಾಯಿಸಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಹೀಗೆ ಬದಲಾವಣೆ ಮಾಡಿದ್ದರಿಂದ ಆ ಜನಗಳಿಗೆ ಬಹಳ ನಷ್ಟ ಆಗಿದೆ, ಇನ್‌ಜಸ್ಟಿಸ್ ಆಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ !

ಶ್ರೀ ಎಸ್. ಆರ್. ಕಂಠಿ.—ಯಾವುದು ಆ ರೀತಿ ಆಗಿದೆ ಎನ್ನುವುದನ್ನು ತೋರಿಸಬೇಕು ಎಂದು ನನ್ನ ವಿಜ್ಞಾಪನೆ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಬದಲಾವಣೆಯಾದ ನಂತರ ಎಷ್ಟು ಜನಗಳಿಗೆ ಪ್ರಮೋಷನ್ ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಎಷ್ಟು ಜನಗಳಿಗೆ ಕೊಟ್ಟಿದ್ದೇವೆಂದು ಹೇಳುವುದು ಕಷ್ಟ. ಎಷ್ಟೋ ಜನರಿಗೆ ಸಿಕ್ಕಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಭಾಷಾ ಉಪಾಧ್ಯಾಯರು ಎಂದರೆ ಯಾವ ಯಾವ ಭಾಷೆಗಳು ಅದರಲ್ಲಿ ಬರುತ್ತವೆ ?

ಶ್ರೀ ಎಸ್. ಆರ್. ಕಂಠಿ.—ಎಲ್ಲ ಭಾರತೀಯ ಭಾಷೆಗಳೂ ಬರುತ್ತವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಭಾಷಾ ಉಪಾಧ್ಯಾಯರ ಸಂಖ್ಯೆ ಬಹಳ ಕಡಮೆ ಇದ್ದು ಎಲ್ಲ ಉಪಾಧ್ಯಾಯರಿಗೂ ಅನ್ವಯಿಸುವಂತೆ ಒಂದೇ ರೀತಿಯಾಗಿ ಸಮನ್ವಯ ಮಾಡಿರುವುದರಿಂದ ಅವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದ ಗಮನಕ್ಕೆ ಬಂದಿಲ್ಲ. ಅವರು ಸ್ವಲ್ಪ ತಪ್ಪು ತಿಳಿದು ಕೊಂಡಂತೆ ಕಾಣುತ್ತದೆ. ಐದಕ್ಕಿಂತ ಕಡಮೆ ಸಂಖ್ಯೆಯಲ್ಲಿ ಭಾಷಾ ಉಪಾಧ್ಯಾಯರು ಎಲ್ಲದ್ದಾರೆ ಅವರು ಹತ್ತು ವರ್ಷಕ್ಕೆ ಕಡಮೆ ಇಲ್ಲದಂತೆ ಸರ್ವಿಸ್ ಮಾಡಿದ್ದರೆ ಅವರಿಗೆ ಪ್ರಮೋಷನ್ ಕೊಡ ಬೇಕೆಂದಾಗಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಬಡ್ತಿ ಕೊಡುವುದರಲ್ಲಿ ಅನ್ಯಾಯವಾಗಿದೆ ಎಂದು ಎಷ್ಟು ಉಪಾಧ್ಯಾಯರು ಅರ್ಜಿಗಳನ್ನು ಸಲ್ಲಿಸಿದ್ದಾರೆ ?

Sri S. R. KANTHI.—No, Sir. I am not aware of it.

Inclusion of Alasettikere Palya and Upparahalli to Tumkur Municipality

322. **Sri B. P. GANGADHAR** (Tumkur).—

Will the Minister for Home and Municipal Administration be pleased to state :—

(*a*) is it not a fact that the Town Municipal Council, Tumkur and Taluk Development Board of Tumkur, have passed resolutions to include Alasettikere Palya and Upparahalli to Tumkur Municipal limits and the said local bodies have been urging the same since a long time ;

(*b*) whether the Government has considered the same ;

(*c*) the stage at which the request of the Municipality and the Taluk Development Board is pending and before whom and since how long ;

(*d*) is it not a fact that the villagers of the said villages Alasettikere Palya and Upparahalli have been demanding for the inclusion of the said villages into Tumkur Town Municipal limits ;

(*e*) the reasons for not considering the demand of the said villagers and the local bodies ;

(*f*) the difficulty, if any, for the Government to finalise the matter immediately ?

A.—**Sri R. M. PATIL** (Minister for Home and Municipal Administration).—

(*a*) Yes.

(*b*) No.